


ಆ ಮೂರು ಪ್ರಮುಖ ಪುಸ್ತಕಗಳ ತಾತ್ವಿಕತೆಯನ್ನು ಅರಿಯುವ ಮೂಲಕ ನುಡಿ ಓದಿನಲ್ಲಿ ಚಾಮ್‌ಸ್ಕಿ ಸೃಷ್ಟಿಸಿದ ಕ್ರಾಂತಿಯನ್ನು ಅರಿಯುವ ಪ್ರಯತ್ನವನ್ನು ಮಾಡಬಹುದು. ನುಡಿ ಓದು ಮತ್ತು ಸಂಶೋಧನೆಗೆ ಬೇಕಾಗುವ ತಾತ್ವಿಕ ಮಾದರಿ ಹಾಗೂ ಪರಿಕಲ್ಪನೆಗಳನ್ನು ರೂಪಿಸುವಲ್ಲಿ ಈ ಮೂರು ಪುಸ್ತಕಗಳು ಅತ್ಯಂತ ಪ್ರಮುಖ ನೆಲೆಗಳಾಗಿರುತ್ತವೆ. ನುಡಿ ಕುರಿತು ಚಾಮ್‌ಸ್ಕಿ ಯೋಚಿಸುವ ಬಗೆಯೇ 'ಮಾದರಿ ಪಲ್ಲಟ'ಕ್ಕೆ (Paradigm Shift) ಕಾರಣವಾಗಿದೆ. ಇಂತಹ ಪಲ್ಲಟಕ್ಕೆ ಕಾರಣವಾಗಿರುವ ತಾತ್ವಿಕತೆಯ ಕುರುಹುಗಳು ಎಂತಹವು? ಅವುಗಳು ಕನ್ನಡದ ಓದು ಮತ್ತು ಸಂಶೋಧನೆಗೆ ಹೇಗೆ ಪೂರಕವಾಗಿ ಒದಗಿ ಬರುತ್ತವೆ ಅನ್ನುವುದನ್ನೂ ಕಂಡರಿಯಲು ಸಾಧ್ಯವಾಗುತ್ತದೆ. ಈ ಸಾಧ್ಯತೆಯನ್ನು ಆಗು ಮಾಡುವಲ್ಲಿ ಕೆ.ವಿ. ನಾರಾಯಣ ಅವರ ಚಾಮ್‌ಸ್ಕಿ ಕುರಿತ ಕೃತಿ ಗಮನಾರ್ಹವಾಗಿದೆ. ವ್ಯಕ್ತಿ ನೆಲೆಯಲ್ಲಿ ಸಣ್ಣಪುಟ್ಟ ಸಾಧ್ಯತೆಗಳನ್ನು ನೋಡಬಹುದೇ ಹೊರತು ಸಾಂಸ್ಥಿಕ ನೆಲೆಯಲ್ಲಿ ಇಂತಹ ಪ್ರಯತ್ನಗಳು ಕರ್ನಾಟಕದ ಸಂದರ್ಭದಲ್ಲಿ ಕಿಂಚಿತ್ತೂ ನಡೆದಿರುವುದಿಲ್ಲ.

ಚಾಮ್‌ಸ್ಕಿಯ ಅತ್ಯಂತ ಪ್ರಸಿದ್ಧ ಕೃತಿ, 'ಸಿಂಟ್ಯಾಕ್ಟಿಕ್ ಸ್ಟ್ರಕ್ಚರ್ಸ್' (1957) ಪ್ರಪಂಚದಾದ್ಯಂತ ಹೆಸರು ಮಾಡಿದೆ. ಭಾಷಾಶಾಸ್ತ್ರದ ಬೆಳವಣಿಗೆಯ ಮೇಲೆ ಈ ಪುಸ್ತಕ ಭಾರೀ ಪ್ರಭಾವ ಬೀರಿದೆ. ಪರಿಣಾಮವಾಗಿ ಭಾಷಾಶಾಸ್ತ್ರದಲ್ಲಿ 'ಚಾಮ್‌ಸ್ಕಿಯನ್ ಕ್ರಾಂತಿ'ಯ ಬಗ್ಗೆ ವಿದ್ವಾಂಸರು ಮಾತನಾಡುತ್ತಾರೆ. ಕುಹ್ನ್ ಅವರ ಪರಿಭಾಷೆಯಲ್ಲಿ ಇದನ್ನು 'ವೈಜ್ಞಾನಿಕ ಮಾದರಿಯ ಪಲ್ಲಟ' ಎಂದು ಕರೆಯಲಾಗುತ್ತದೆ.

**ರಾಜಕೀಯ ಚಿಂತನೆಗಳ ನೀಲನಕ್ಷೆ**

ಚಾಮ್‌ಸ್ಕಿಯ ವೈಚಾರಿಕತೆಯ ವ್ಯಾಪ್ತಿ ಅತ್ಯಂತ ವ್ಯಾಪಕವಾಗಿದೆ. ಭಾಷಾಶಾಸ್ತ್ರದಿಂದ ಶುರುವಾಗಿ ರಾಜಕೀಯದವರೆಗೆ ಹರಡಿಕೊಂಡಿದೆ. ಈ ಇಡೀ ವೈಚಾರಿಕ ಪ್ರಕ್ರಿಯೆಯಲ್ಲಿ ಭಾಷೆ, ರಾಜಕೀಯ, ಸಮಾಜ, ಧರ್ಮ, ಆರ್ಥಿಕತೆ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅರ್ಥ ಮಾಡಿಕೊಳ್ಳಲು ಇಲ್ಲಿ ಸಾಕಷ್ಟು ಒಳನೋಟಗಳು ಹಾಗೂ ಕಣ್ಣೋಟಗಳು ದೊರೆಯುತ್ತವೆ. ಅಂದರೆ ಬದುಕಿನ ಸಂಕೀರ್ಣತೆಯನ್ನು ಪರಿಶೀಲಿಸಿ ಅರ್ಥೈಸಲು ಈ ಚಿಂತನೆಗಳು ಬಹುಮುಖ್ಯವಾದ ಪರಿಕರಗಳಾಗಿ ಒದಗಿಬರುತ್ತವೆ. ಉದಾಹರಣೆಗೆ, 'ಹೆಜೆಮನಿ ಆರ್ ಸರ್ವೈವಲ್' ಎನ್ನುವ ಪುಸ್ತಕದಲ್ಲಿ ಅಮೆರಿಕದ ವಿದೇಶಾಂಗ ನೀತಿಯನ್ನು ಟೀಕಿಸುವುದರ ಜೊತೆಗೆ, ಆ ದೇಶವು ಅನುಸರಿಸುವ ಇಂತಹ ನೀತಿಗಳಿಂದ ಜಾಗತಿಕವಾಗಿ ಏರ್ಪಡುವ ಹಲವು ಬಗೆಯ ಪರಿಣಾಮಗಳನ್ನು ವಿಶ್ಲೇಷಿಸುತ್ತಾನೆ. ಸಾಮ್ರಾಜ್ಯಶಾಹಿ, ಮಿಲಿಟರಿಸಂ ಮತ್ತು ಕಾರ್ಪೊರೇಟ್ ಶಕ್ತಿಯ ಪ್ರಭಾವನ್ನು ಬಳಸಿಕೊಂಡು, ಅಮೆರಿಕ ತನ್ನ ಪ್ರಾಬಲ್ಯವನ್ನು ಜಗತ್ತಿನಾದ್ಯಂತ ಸಾಧಿಸುವ ಹುನ್ನಾರವನ್ನು ಹೇಗೆ ಮಾಡುತ್ತದೆ ಅನ್ನುವುದು ಚಾಮ್‌ಸ್ಕಿಯ ರಾಜಕೀಯ ಚಿಂತನೆಗಳಲ್ಲಿ ಪ್ರಕಟವಾಗಿದೆ. ಜಗತ್ತಿನ ರಾಜಕೀಯ ಸನ್ನಿವೇಶದಲ್ಲಿ ಮೈದೋರುವ ಇಂತಹ ಕರಾಳ ವಾಸ್ತವವನ್ನು ಸೂಕ್ಷ್ಮ